**ಓ.ಎಸ್. ನಂ. 611/2014 ಪಿ.ಡಬ್ಲೂ-1 ಹೆಸರು - ಸೋಮಶೇಖರ್**

**ಸಾಕ್ಷಿಯನ್ನು ದಿನಾಂಕಃ 13.07.2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮು. ಪಾಟೀ ಸವಾಲುಃ ಶ್ರೀ. ಬಿ.ವೈ ವಕೀಲರಿಂದಃ-**

ನಿಪಿ 29 ದಾವಾ ಸ್ವತ್ತಿಗೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ಪ್ರಾರಂಭಿಕ ಹಂತದಲ್ಲಿ ಸರ್ವೆ ನಂಬರ್ ಸ್ವರೂಪದಲ್ಲಿತ್ತು ಎಂದರೆ ಸಾಕ್ಷಿ ನಾವು ಖರೀದಿ ಮಾಡುವ ಕಾಲಕ್ಕೆ ನಿವೇಶನದ ರೂಪದಲ್ಲಿತ್ತು ಎಂದು ಹೇಳುತ್ತಾರೆ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಬಡಾವಣೆಯ ನಕ್ಷೆಯನ್ನು ನೀಡಿಲ್ಲ. ಅಸ್ತಿತ್ವದಲ್ಲಿಲ್ಲದ ಸ್ವತ್ತಿನ ಕುರಿತು ನಾನು ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಇದೇ ದಾಖಲಾತಿಗಳನ್ನು ಸ್ವಾಮಿಯವರು ಹಿಂದಿನ ದಾವೆಯಲ್ಲೂ ಸಹ ನೀಡಿದ್ದರು ಎಂದರೆ ಸರಿ. ಹಿಂದಿನ ದಾವೆಗಳು ವಜಾಗೊಂಡಿದ್ದರೂ ಸಹ ವಾದಿಯೇ ಸ್ವಾಧೀನತೆಯಲ್ಲಿದ್ದಾರೆ ಎಂದು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ವಾದಿಯ ಸ್ವಾಧೀನತೆಗೆ ತಕರಾರು ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ವ್ಯವಹಾರದ ಕುರಿತು ಪೊಲೀಸ್ ಠಾಣೆಗೆ ಹೋಗಿರುವ ಬಗ್ಗೆ ನನಗೆ ಗೊತ್ತಿಲ್ಲ. ನಾನು ಹಾಜರುಪಡಿಸಿರುವ ವಾದಿಗೆ ಸಂಬಂಧಿಸಿದ ಕ್ರಯ ಪತ್ರದಂತೆ ವಾದಿಗೆ ಯಾವುದೇ ಹಕ್ಕು ಮತ್ತು ಸ್ವಾಧೀನತೆ ಅರ್ಜಿಸಿರುವುದಿಲ್ಲ ಎಂದರೆ ಸರಿಯಲ್ಲ. ಈಗಲೂ ಸಹ ಪ್ರತಿವಾದಿಯ ಹಕ್ಕಿಗೆ ಒಳಪಟ್ಟಿದ್ದು, ಪ್ರತಿವಾದಿಯೇ ಸ್ವಾಧೀನತೆಯಲ್ಲಿದ್ದಾರೆ ಎಂದರೆ ಸರಿಯಲ್ಲ. ಈಗಲೂ ಸಹ ಪ್ರತಿವಾದಿಯೇ ಸದರಿ ಸ್ವತ್ತಿಗೆ ಕಂದಾಯವನ್ನು ಪಾವತಿಸುತ್ತಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಸೇರಿದ ಸ್ವತ್ತನ್ನು ಕಬಳಿಸಲು ವಾಸ್ತವಾಂಶಕ್ಕೆ ವ್ಯತಿರಿಕ್ತವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಓ**

ಸಹಿ/-

**ಪ್ರಧಾನ ಸಿ.ಜೆ ಮತ್ತು ಪ್ರದನ್ಯಾದಂ,**

**ನಂಜನಗೂಡು**